ಅಲ್ಪಸಂಖ್ಯಾತರ ಅಭಿವೃದ್ಧಿಗೆ ಮೀಸಲಿಟ್ಟಿರುವ ಹಣ.

861 (1273) ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) :— ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಸಾಲ ಸವಲತ್ತುಗಳನ್ನು ನೀಡಲು ಹೊಂದಿದ್ದ ಫಲಾನುಭವಿಗಳ ಗುರಿ ಎಷ್ಟು;

ಆ) ಇದಕ್ಕಾಗಿ ಮೀಸಲಿಟ್ಟಿದ್ದ ಮೊತ್ತವೆಷ್ಟು;

ಇ) ಪ್ರಸ್ತುತ ಸಾಲಿನವರೆವಿಗೂ ವಿತರಣೆಯಾಗಿರುವಂತಹ ಫಲಾನುಭವಿಗಳ ಒಟ್ಟು ಸಂಖ್ಯೆ ಮತ್ತು ಒಟ್ಟು ಮೊತ್ತವೆಷ್ಟು?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :—

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಪ್ರಾರಂಭವಾದ ದಿನಾಂಕದಿಂದ 1998-99ನೇ ಸಾಲಿನವರೆಗೆ ಸ್ವಾವಲಂಬನ ಸಾಲದ ಯೋಜನೆ ಅಡಿಯಲ್ಲಿ ರಾಜ್ಯಾದ್ಯಂತ 56,249 ಫಲಾನುಭವಿಗಳಿಗೆ ಸಾಲ ಒದಗಿಸಲು ಗುರಿಯನ್ನು ನಿಗದಿಪಡಿಸಲಾಗಿತ್ತು.

ಆ) ನಿಗಮ ಪ್ರಾರಂಭವಾದ ದಿನಾಂಕದಿಂದ ಸ್ವಾವಲಂಬನ ಸಾಲದ ಯೋಜನೆಗೆ ಸರ್ಕಾರದ ಆಯವ್ಯಯದಲ್ಲಿ ಶೇರು ಬಂಡವಾಳವಾಗಿ ರೂ.32.43 ಕೋಟಿಗಳನ್ನು ಹಾಗೂ ಸಹಾಯಧನವನ್ನಾಗಿ ರೂ.220 ಲಕ್ಷಗಳನ್ನು ಮೀಸಲಿಟ್ಟಿಡಲಾಗಿತ್ತು. ಇದರಲ್ಲಿ ರೂ. 220 ಲಕ್ಷಗಳನ್ನು ಮೀಸಲಿಟ್ಟಿರಲಾಗಿತ್ತು. ಇದರಲ್ಲಿ ಇಲ್ಲಿಯವರೆವಿಗೂ ಸರ್ಕಾರವು ನಿಗಮಕ್ಕೆ ರೂ.21.03 ಕೋಟಿಗಳನ್ನು ಷೇರುಬಂಡವಾಳವಾಗಿ ಹಾಗೂ ರೂ.105 ಲಕ್ಷಗಳನ್ನು ಸಹಾಯಧನವನ್ನಾಗಿ ಬಿಡುಗಡೆ ಮಾಡಲಾಗಿದೆ.

ಇ) ನಿಗಮವು ಪ್ರಾರಂಭವಾದ ದಿನಾಂಕದಿಂದ ಫೆಬ್ರುವರಿ 99ರ ಮಾಹೆಯವರೆವಿಗೂ 39,721 ಫಲಾನುಭವಿಗಳು ರೂ.21.77ಕೋಟಿಗಳಷ್ಟು ಮಾರ್ಜಿನ್ ಹಣವನ್ನು ಹಾಗೂ 1-4-98 ರಿಂದ 2724 ಫಲಾನುಭವಿಗಳಿಗೆ ರೂ. 1.23 ಕೋಟಿ ಸಹಾಯಧನ ಒದಗಿಸಲಾಗಿದೆ.